

# ಹಲ್ಲುಗಳಲ್ಲಿ ಅಂಕೆಪ್ರೊರೆ; ಅಂಕೆವಾಣ ತೊಂದರೆ

ಬಾಯಿಯಲ್ಲಿರುವ ಎರಡು ಸೂಕ್ಷ್ಮವಾದ ಅಂಗಾಂಶಗಳು ಕೆಲವೊಮ್ಮೆ ತೊಂದರೆ ಕೊಡುವ ಸಾಧ್ಯತೆ ಇದೆ. ಪರಿಣತ ದಂತವೈದ್ಯರು ಈ ಸಮಸ್ಯೆಯನ್ನು ಸಣ್ಣ ಶಸ್ತ್ರಚಿಕಿತ್ಸೆ ಮೂಲಕ ಸರಿಪಡಿಸಬಲ್ಲರು. ಹಲ್ಲು, ವಸಡು, ಬಾಯಿಗೆ ಸಂಬಂಧಿಸಿದ ತೊಂದರೆ ಕಂಡುಬಂದಲ್ಲಿ ತಕ್ಷಣ ವೈದ್ಯರನ್ನು ಸಂಪರ್ಕಿಸುವುದು ಒಳಿತು.

■ ಡಾ.ಪ್ರೇಮಲತ ಬಿ.

ದೇಹದ ಎಲ್ಲ ಪ್ರತಿ ಸಣ್ಣ ಭಾಗಗಳು ನಮಗೆ ಅತಿ ಮುಖ್ಯ. ಒಂದೊಂದು ಸಣ್ಣ ಅಂಗಾಂಶಕ್ಕೂ (tissue) ಅದರದೇ ಮಹತ್ವವಿದೆ. ಕೆಲವೊಂದು ಸಣ್ಣ –ಪುಟ್ಟ ಅಂಗಾಂಶಗಳ ಅದರಲ್ಲೂ ಯಾರಿಗೂ ಕಾಣದ ಭಾಗಗಳನ್ನು ನಾವು ಗಮನಿಸುವುದೇ ಇಲ್ಲ. ಆದರೆ, ಅಗತ್ಯವಿಲ್ಲದ ಯಾವ ದೇಹ ಭಾಗಗಳೂ ನಮ್ಮಲ್ಲಿಲ್ಲ. ಪ್ರತಿಯೊಂದು ಸಣ್ಣ ಅಂಗಾಂಶದ ಬೆಲೆಯ ಅರಿವು ನಮಗಾಗುವುದು ಯಾವಾಗಲಾದರೂ ಅವುಗಳು ತೊಂದರೆ ಕೊಟ್ಟರೆ ಅಥವಾ ತೊಂದರೆಗೊಳಗಾದಾಗ ಮಾತ್ರ.

ಅದರಲ್ಲೂ ಬಾಯಿಯೆಂದರೆ ಹಲ್ಲು, ನಾಲಿಗೆ, ತುಟಿಗಳಷ್ಟೇ ನಮ್ಮ ಮನಸ್ಸಿನಲ್ಲಿ ಮೂಡುವುದು. ಆದರೆ, ಕೆಲವೊಮ್ಮೆ ಬಾಯಲ್ಲಿರುವ ಇನ್ನಿತರ ಸಣ್ಣ ಅಂಗಾಂಶಗಳು ಕೂಡ ಬಹು ಮುಖ್ಯ ಪಾತ್ರ ವಹಿಸುತ್ತವೆ. ತೊಂದರೆ ಕೊಟ್ಟು ಕಾಡುತ್ತವೆ. ಆಗಷ್ಟೆ ನಮಗೆ ಅವುಗಳ ಇರುವು, ಅವುಗಳ ಮಹತ್ವ ಅವುಗಳ ರೂಪು ರೇಷೆಗಳಲ್ಲಿ ವ್ಯತ್ಯಾಸವಾದಲ್ಲಿ ಆಗುವ ಪರಿಣಾಮಗಳ ಬಗ್ಗೆ ತಿಳಿವಳಿಕೆ ಬರುತ್ತದೆ. ಇಂತಹ ತೊಂದರೆಗಳ ನಿವಾರಣೆಯ ಬಗ್ಗೆ ತಿಳಿವಳಿಕೆ ಯಿದ್ದಲ್ಲಿ ಆತಂಕಕ್ಕೆ ಅವಕಾಶವಿರುವುದಿಲ್ಲ. ನಮ್ಮ ಅರಿವನ್ನು ಇತರರಿಗೂ ನೀಡಿ ಅವರ ಸಮಸ್ಯೆಗಳಿಗೆ ನಾವು ಪರಿಹಾರವನ್ನು ಸೂಚಿಸಿ ಸಹಾಯ ಮಾಡಬಹುದು.

ನಮ್ಮ ಬಾಯಿಯಲ್ಲಿಯೂ ಮಹತ್ವವುಳ್ಳ ಮತ್ತೆರಡು ಸಣ್ಣ ಅಂಗಾಂಶಗಳಿವೆ. ಇವುಗಳನ್ನು ನಾವು ಅಂಕೆವಾಣ (**Labial Frenum**) ಮತ್ತು ಅಂಕೆ ಪೊರೆ (**lingual frenum**) ಎಂದು ಕರೆಯುತ್ತೇವೆ.

ಅಂಕೆ ಪೊರೆ (**Lingual frenum**) ಅಂಗಾಂಶ ದಿಂಡು ನಾಲಿಗೆಯನ್ನು ಬಾಯಿಯ ತಳಭಾಗಕ್ಕೆ ಕೂಡಿಸುತ್ತದೆ. ಈ ಕೂಡಿಕೊಳ್ಳುವಿಕೆಯ ಆದಾರದ ಮೇಲೆ ನಾವು ನಾಲಿಗೆಯನ್ನು ಎಷ್ಟು ಮೇಲಕ್ಕೆ ಎತ್ತಬಹುದು, ಎಷ್ಟು ಹೊರಕ್ಕೆ ಚಾಚಬಹುದು ಎಂದು ನಿರ್ಧರಿಸಬಹುದು. ಹಲವು ಬಾರಿ ಆ ದಿಂಡು ದಪ್ಪಗೆ, ಉದ್ದಕ್ಕೆ ನಾಲಿಗೆಯ ಉದ್ದಕ್ಕೂ ಬೆಳೆದುಕೊಂಡು ನಾಲಿಗೆಯನ್ನು ಬಾಯಿಯ ತಳಕ್ಕೆ ಬಂಧಿಸುತ್ತದೆ. ಇದನ್ನೇ ನಾವು 'ಟಂಗ್ ಟೈ' (**Tongue Tie**) ಎಂದು ಕರೆಯುವುದು. ಇದರಿಂದ ನಾಲಿಗೆಯ ಚಲನವಲನಕ್ಕೆ ತೊಂದರೆಯಾಗುತ್ತದೆ. ಉಚ್ಚಾರಣೆಯಲ್ಲಿ ತೊದಲು ಕಾಣಿಸಿಕೊಳ್ಳುತ್ತದೆ. ನಾಲಿಗೆಯನ್ನು ಎತ್ತಿ ಮೇಲಿನ ತುಟಿಯನ್ನು ಸವರಿಕೊಳ್ಳಲು ಸಾಧ್ಯವಾಗುವುದಿಲ್ಲ. ಸಾಮಾನ್ಯವಾಗಿ ಮಕ್ಕಳಲ್ಲಿಯೇ ಈ ತೊಂದರೆಯನ್ನು ಗುರುತಿಸಬಹುದು.

ಈ ಸಮಸ್ಯೆಯನ್ನು ಪರಿಣಿತ ದಂತವೈದ್ಯರು ಸಣ್ಣ ಶಸ್ತ್ರಚಿಕಿತ್ಸೆಯ ಮೂಲಕ ಸರಿಪಡಿಸಬಲ್ಲರು. ಯಾವ ಆಸ್ಪತ್ರೆಯಲ್ಲೂ ದಾಖಲಾಗುವ ಅಗತ್ಯವೇನೂ

